**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.137/2020**

**(ಚಾ.ಸಾ.5/ಪ್ರಾ.ಸಾ.2)**

ತಾ:26-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಮನು |
| ಗಂಡನ ಹೆಸರು | ವಿಜಯ್ ಕುಮಾರ್ |
| ವಯಸ್ಸು | 30 ವರ್ಷ |
| ಉದ್ಯೋಗ | ಆಟೋ ಡ್ರೈವರ್, |
| ವಾಸ ಸ್ಥಳ | ಲಗ್ಗೆರೆ, ಬೆಂಗಳೂರು. |

**<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ:</u>**

1. ಚಾಸಾ.3 ಪುಷ್ಪ ನನ್ನ ಅಕ್ಕ ಆಗಿದ್ದು, ಮೃತ ಪ್ರಸನ್ನಕುಮಾರ್ ನನ್ನ ಭಾವ ಆಗಿರುತ್ತಾರೆ. ಚಾಸಾ.3 ರವರು ಮಾಲ್ ನಲ್ಲಿ ಕೆಲಸ ಮಾಡುತ್ತಿದ್ದು, ನನ್ನ ಭಾವ ಕಾರ್ಪೆಂಟರ್ ಆಗಿ ಕೆಲಸ ಮಾಡುತ್ತಿದ್ದರು. ಚಾಸಾ.1 ಹಾಗೂ ನನ್ನ ಭಾವ ನಂದಿನಿ ಲೇಔಟ್ ನಲ್ಲಿ ವಾಸ ಇದ್ದರು. ಚಾಸಾ.3 ರವರಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ನಾನು ಸುಮಾರು 6-7 ವರ್ಷಗಳಿಂದ ಆಟೋ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಚಾಸಾ.7 ರವರವ ಪರಿಚಯ ಇರುತ್ತದೆ. ನನ್ನ ಭಾವನನ್ನು ಹೊಡೆದ ಕಾರಣ ಮೃತ ಪಟ್ಟಿರುತ್ತಾರೆ. ಚಾಸಾ.7 ರವರು ದಿನಾಂಕ 17-02-2020 ರಂದು ನನಗೆ ಬೆಳಗ್ಗೆ 09:30

ರ ಸಮಯದಲ್ಲಿ ಫೋನ್ ಮಾಡಿ ನನ್ನ ಭಾವ ಎಲ್ಲಿದ್ದಾರೆಂದು ವಿಚಾರಿಸಿದಾಗ ಮನೆಯಲ್ಲಿ ಇರುವುದಾಗಿ ತಿಳಿಸಿರುತ್ತೇನೆ. ಆಗ ಚಾಸಾ.7 ರವರು ನನ್ನ ಭಾವ ಮನೆಯಲ್ಲಿಲ್ಲ, ಅಂಜನಾನಗರದ ಬಳಿ ಎಮ್.ಆರ್.ಪಿ. ಲಿಕ್ಕರ್ ಸೇಲ್ ಬಳಿ ಬರುವಂತೆ ತಿಳಿಸಿರುತ್ತಾರೆ. ಆಗ ಚಾಸ.7 ರವರಿ ಬಳಿ ವಿಚಾರಿಸಿದಾಗ ನನ್ನ ಭಾವ ಮೊಬೈಲ್ ಫೋನ್ ಎತ್ತಿಕೊಂಡಿರುವುದಾಗಿ ತಿಳಿಸಿರುತ್ತಾರೆ. ನಾನು ಸದರಿ ಸ್ಥಳಕ್ಕೆ ಬೆಳಗ್ಗೆ 10ಃ30 ಕ್ಕೆ ಹೋಗಿ ಸದರಿ ಸ್ಥಳದಲ್ಲಿ ಸುಮಾರು 25 ನಿಮಿಷದ ವರೆಗೆ ಕಾದಿದ್ದು, ಚಾಸಾ.7 ರವರು ಬಂದಿರುವುದಿಲ್ಲ. ನಾನು ಪುನಃ ಚಾಸಾ.7 ರವರಿಗೆ ಫೋನ್ ಮಾಡಿ ವಿಚಾರಿಸಿದಾಗ ತಾನು ಬರುತ್ತಿರುವುದಾಗಿ ಹೇಳಿ ಸದರಿ ಸ್ಥಳಕ್ಕೆ 10 ಅಥವಾ 15 ನಿಮಿಷದಲ್ಲಿ ಬಂದಿರುತ್ತಾರೆ. ಚಾಸಾ.7 ರವರು ತನ್ನ ವಾಹನವನ್ನು ಅಲ್ಲೇ ಪಾರ್ಕ್ ಮಾಡಿ ನಾವಿಬ್ಬರೂ ನನ್ನ ಆಟೋದಲ್ಲಿ ಹೇರೋಹಳ್ಳಿಗೆ ಹೋಗಿರುತ್ತೇವೆ.

2. ಹೇರೋಹಳ್ಳಿ-ಮಾಗಡಿ ಮುಖ್ಯ ರಸ್ತೆಯಲ್ಲಿ ಪದ್ಮಾವತಿ ಬಾರ್ ಇದ್ದು, ಅದರಿಂದ ಎಡಕ್ಕೆ ಚಾಸಾ.7 ರವರು ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ನಾವು ಸದರಿ ರಸ್ತೆಯಲ್ಲಿ ಸುಮಾರು 500 ಮೀಟರ್ ವರೆಗು ಆಟೋನಲ್ಲಿ ಹೋಗಿ ಅಲ್ಲಿ ನಿಲ್ಲಿಸಿ ಅಲ್ಲಿಂದ ನಾವಿಬ್ಬರೂ ನಡೆದುಕೊಂಡು ಮುಂದಕ್ಕೆ ಹೋಗಿದ್ದು, ಅದು ಕಾಡಿನಂತೆ ಇತ್ತು. ಸದರಿ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ನನ್ನ ಭಾವ, ಆತನ ಸ್ನೇಹಿತರಾದ ಚಾಸಾ.1 ಹಾಗೂ ಚಾಸಾ.2 ಚಂದ್ರಶೇಖರ್ ಇದ್ದರು. ನಾನು ನೋಡಿದಾಗ ನನ್ನ ಭಾವ, ಚಾಸಾ.1 ಮತ್ತು 2 ರವರಿಗೆ ಹೊಡೆದಿದ್ದು, ಅವರೆಲ್ಲರೂ ಸುಸ್ತಾಗಿ ಕುಳಿತಿದ್ದರು. ಸದರಿ ಸ್ಥಳದಲ್ಲಿ ಮೇಲ್ಕಂಡವರಿಗೆ ಹಲ್ಲೆ ಮಾಡಿದ 5 ಜನ ವ್ಯಕ್ತಿಗಳು ಹಾಜರಿದ್ದರು. ಆ 5 ಜನ ವ್ಯಕ್ತಿಗಳು ನನ್ನನ್ನು ವಿಚಾರಿಸಿದಾಗ ಮೃತ ಪ್ರಸನ್ನ ಕುಮಾರ್ ಇವರು ನನ್ನ ಭಾವ ಆಗಿರುವುದಾಗಿ

ತಿಳಿಸಿದ್ದು, ಆ ವ್ಯಕ್ತಿಗಳು ನನ್ನ ಭಾವ ಮೊಬೈಲ್ ಕದ್ದಿರುವ ಕಾರಣ ಆತನನ್ನು ಕರೆದುಕೊಂಡು ಹೋಗಿರುವುದಾಗಿ ತಿಳಿಸಿರುತ್ತಾರೆ. ಮೊಬೈಲ್ ಬಗ್ಗೆ ನನ್ನ ಭಾವನನ್ನು ವಿಚಾರಿಸಿದಾಗ ತಾನು ಆ ರೀತಿ ಯಾವುದೇ ಮೊಬೈಲ್ ಕದ್ದಿಲ್ಲ, ಮೊಬೈಲ್ ಬಗ್ಗೆ ತನಗೆ ತಿಳಿದಿಲ್ಲ ಎಂದು ತಿಳಿಸಿರುತ್ತಾರೆ.

3. ಆ ವ್ಯಕ್ತಿಗಳು ನನ್ನ ಬಳಿ ಮೊಬೈಲ್ 15,000/- ರೂ ಬೆಲೆ ಬಾಳುತ್ತಿದ್ದು, ನನ್ನ ಭಾವನ ಪರವಾಗಿ 5,000/- ರೂ ಹಣ ಕೊಡುವಂತೆ ತಿಳಿಸಿರುತ್ತಾರೆ. ಅದಕ್ಕಾಗಿ ಆ ವ್ಯಕ್ತಿಗಳಿಗೆ ನನ್ನ ಭಾವನಿಗೆ ಹೊಡೆಯಬೇಡಿ ಎಂದು ಹೇಳಿ 5,000/- ರೂ ಹೊಂದಿಸಲು ನಾನು ಮನೆಗೆ ಬಂದಿದ್ದು, ಆದರೆ ಪೂರ 5,000/- ರೂ ಹೊಂದಿಸಲು ಆಗಿರುವುದಿಲ್ಲ. ನಂತರ ಚಾಸಾ.7 ರವರು ನನಗೆ ಫೋನ್ ಮಾಡಿ ನನ್ನ ಭಾವನನ್ನು ಬಿಟ್ಟುಕಳುಹಿಸಿರುವುದಾಗಿ ತಿಳಿಸಿದ್ದು, ಆದರೆ ನನ್ನ ಭಾವ ಆ ದಿನ ಮನೆಗೆ ಬಂದಿಲ್ಲ. ನನ್ನ ಭಾವನನ್ನು ಬಿಟ್ಟಿರುವುದಾಗಿ ಹೇಳಿದ ಕಾರಣ ನಾವು ಸುಮ್ಮನಾಗಿದ್ದು, ನಂತರ ಅದೇ ದಿನ ಸಂಜೆ ನನ್ನ ಭಾವನನ್ನು ಹುಡುಕಲು ಹೋಗಿರುತ್ತೇವೆ. ಆ ದಿನ ನನ್ನ ಭಾವನ ಪತ್ತೆ ಆಗಿರುವುದಿಲ್ಲ. ನನ್ನ ಭಾವನನ್ನು ಆ ದಿನ ಹೇರೋಹಳ್ಳಿ ಗ್ರಾಮ ಹಾಗೂ ಗಾಡಿ ನಿಲ್ಲಿಸಿದ ಮಣ್ಣಿನ ರಸ್ತೆ ಇದ್ದ ಸ್ಥಳದ ವರೆಗೂ ಹೋಗಿ ಹುಡುಕಿದ್ದು, ಮುಂದೆ ಕಾಡು ಇದ್ದ ಕಾರಣ ಕಾಡಿನ ಒಳಗೆ ಹೋಗಿಲ್ಲ. ಮಾರನೇ ದಿನ ಬೆಳಗ್ಗೆ ನಾನು, ಚಾಸಾ.3, ನನ್ನ ಭಾವನ ತಂಗಿ ಆದ ಚಾಸಾ.8 ಪುಷ್ಪ ಹಾಗೂ ನನ್ನ ಭಾವನ ತಾಯಿ ಚಾಸಾ.4 ಕಮಲಮ್ಮ ಎಲ್ಲರೂ ಹೋಗಿ ಹೇರೋಹಳ್ಳಿ ಗ್ರಾಮ, ನಾನು ಆಟೋ ನಿಲ್ಲಿಸಿದ ಸ್ಥಳ, ಮುತ್ತಿನಪಾಳ್ಯ ಗ್ರಾಮದಲ್ಲಿ ನನ್ನ ಭಾವನನ್ನು ಹುಡುಕಿರುತ್ತೇವೆ.

4. ನಾನು ನನ್ನ ಭಾವನನ್ನು ಮೊದಲು ನೋಡಿದ ಸ್ಥಳದಿಂದ ಸ್ವಲ್ಪ ಮುಂದಕ್ಕೆ

ಕಾಡಿನ ಒಳಗೆ ಹೋಗಿ ಹುಡುಕಿದಾಗ ನನ್ನ ಭಾವನ ಮೃತ ದೇಹ ಪತ್ತೆ ಆಗಿರುತ್ತದೆ. ನನ್ನ ಭಾವನನ್ನು ನೋಡಿದಾಗ ಆತನ ಬಲ ಕಣ್ಣಿನ ಹತ್ತಿರ, ಕುತ್ತಿಗೆಯ ಹಿಂಭಾಗದಲ್ಲಿ ರಕ್ತ ಆಗಿದ್ದು, ಇರುವೆ ಮುತ್ತಿದ್ದು, ನನ್ನ ಭಾವನ ಉಳಿದ ದೇಹದ ಭಾಗದಲ್ಲಿ ರಕ್ತ ಹೆಪ್ಪುಗಟ್ಟಿತ್ತು.

5. ಸಾಕ್ಷಿದಾರರು ತನ್ನ ಭಾವನ ಮೃತ ದೇಹ, ಅದು ಬಿದ್ದ ಸ್ಥಳದ ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳು ಕ್ರಮ ಸಂಖ್ಯೆ 1 ರಿಂದ 14 ಆಗಿದ್ದು, ಅವುಗಳನ್ನು ಈಗಾಗಲೇ ನಿಪಿ.1 ಎಂದು ಗುರುತಿಸಿರುತ್ತದೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಹಾಜರಿರುವ 1 ರಿಂದ 5 ನೇ ಆರೋಪಿತರನ್ನು ನೋಡಿ ಇದೇ ವ್ಯಕ್ತಿಗಳನ್ನು ಆ ದಿನ ಕಾಡಿನೊಳಗೆ ನನ್ನ ಭಾವ, ಚಾಸಾ.1 ಮತ್ತು 2 ರವರ ಜೊತೆ ಇದ್ದ ವ್ಯಕ್ತಿಗಳು ಎಂದು ನೋಡಿ ಗುರುತಿಸಿರುತ್ತಾರೆ. ನಾನು ಪ್ರಕರಣಕ್ಕೆ ಸಂಭಂದಿಸಿದಂತೆ ಪೋಲೀಸರಿಗೆ ಹೇಳಿಕೆ ನೀಡಿದ್ದು, ಪೋಲೀಸರು ಒಟ್ಟು ನನ್ನನ್ನು ಮೂರು ಬಾರಿ ಕರೆಸಿದ್ದರು. ನಾನು ಮೊದಲ ಬಾರಿಗೆ ದಿನಾಂಕ 18-02-2020 ರಂದು ಹೇಳಿಕೆ ನೀಡಿದ್ದು, ಅದಾದ ಒಂದು ವಾರದ ನಂತರ ನನ್ನ ಭಾವನನ್ನು ಕೊಂದುಹಾಕಿದ ವ್ಯಕ್ತಿಗಳನ್ನು ಬಂದಿಸಿದ್ದು, ಠಾಣೆಗೆ ಬಂದು ಅವರನ್ನು ನೋಡುವಂತೆ ಕರೆಸಿದ್ದರು. ನಾನು ಪೋಲೀಸ್ ಠಾಣೆಗೆ ಹೋದಾಗ ಠಾಣೆಯಲ್ಲಿ ಇಬ್ಬರು ವ್ಯಕ್ತಿಗಳಿದ್ದು, ಅವರನ್ನು ನಾನು ಠಾಣೆಯಲ್ಲಿ ಗುರುತಿಸಿರುತ್ತೇನೆ. ಅದಾದ ಒಂದು ವಾರದ ನಂತರ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದು, ಆ ಸಮಯದಲ್ಲಿ 3 ಜನ ವ್ಯಕ್ತಿಗಳು ಠಾಣೆಯಲ್ಲಿದ್ದು, ಅವರನ್ನೂ ಸಹ ನಾನು ಠಾಣೆಯಲ್ಲಿ ಗುರುತಿಸಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ</u>

1. ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಆರೋಪಿತರು ತಮ್ಮ ಪರ

ವಕೀಲರು ಊರಿಗೆ ಹೋಗಿದ್ದು, ಪಾಟೀ ಸವಾಲು ಮಾಡಲು ಸಮಯ ಕೋರಿರುತ್ತಾರೆ. ಪಾಟೀ ಸವಾಲಿಗೆ ಸಮಯ ನೀಡಲು ಯಾವುದೇ ಸಕಾರಣ ಇಲ್ಲವಾಗಿ ಆರೋಪಿತರ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.